ಮಾಡಬೇಕಾಗುತ್ತದೆ. ಈ ಸಭೆ ಮುಗಿಯುವುದರೊಳಗೆ ನಾನು ಒಂದು ಖಚಿತವಾದ ಹೇಳಿಕೆ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು, ಇದರ ಬಗ್ಗೆ ಪರಿಶೀಲಿಸಲು ನೀರಾವರಿ ಸಲಹಾ ಸಮಿತಿ ಇದೆಯೆಂದು ಹೇಳಿದ್ದಾರೆ. ಸಲಹಾ ಸಮಿತಿ ಇದೆ. ಒಂದು ಸಭೆ ಕರೆದಿದ್ದಾರೆ. ಎರಡನೆಯ ಬಾರಿ, ಮಾನ್ಯ ಹಿರಿಯ ಸದಸ್ಯರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ ಹಾಗೆ ನಾಲ್ಕೂವರೆ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಜಾಸ್ತಿ ಬಂದಿದೆ. ಅದಾದಮೇಲೆ ಮೀಟಿಂಗ್ ಕರೆಯಿರಿ ಎಂದು ಹೇಳಿದರೆ, ಅವರು ಮೀಟಿಂಗ್ ಕರೆಯುವುದಕ್ಕೆ ಸಿದ್ಧವಾಗಿಲ್ಲ. ಮೂರು, ನಾಲ್ಕು ನಾಲ್ಕು ಪತ್ರಗಳನ್ನು ಬರೆದು ಸಂಬಂಧಪಟ್ಟ ಶಾಸಕರು ತಿಳಿಸಿದ್ದಾರೆ. ಆದರೆ ಅವರು ಮೀಟಿಂಗ್ ಕರೆಯುವುದಕ್ಕೆ ತಯಾರಿಲ್ಲ. ನೀರು ಹೆಚ್ಚು ಬಂದಿದೆಯೆಂದು ಅವರು ಒಪ್ಪಿಕೊಳ್ಳುವುದಕ್ಕೂ ತಯಾರಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನೀರು ಹೆಚ್ಚಿದೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಅವರ ಇಲಾಖೆಯ ವರದಿ ಮೇಲೆ ನಾನು ಮಾತನಾಡುತ್ತಿರುವುದು. ನಾಲ್ಕೂವರೆ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಹೆಚ್ಚಿದೆಯೆಂದು ಅಧಿಕಾರಿಗಳ ವರದಿಯು ಹೇಳುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಹೇಳುತ್ತಿದ್ದುದು, ನೀರಾವರಿ ಸಲಹಾ ಸಮಿತಿ ಕರೆಯಲು ಮೇಲಿಂದ ಮೇಲೆ ಪತ್ರಗಳನ್ನು ಶಾಸಕರು ಏನು ಬರೆದಿದ್ದರು? ಅದಕ್ಕೆ ಬರೆದಿರತಕ್ಕಂಥ ಉತ್ತರ 4-2-91ರಂದು ನೀರಾವರಿ ಸಲಹಾ ಸಮಿತಿಯ ಸರ್ವ ಸದಸ್ಯರ ಜಲಾಶಯದ ನೀರಿನ ಪ್ರಮಾಣದ ಮಾಹಿತಿ ಮತ್ತು ಕಾಲುವೆಗೆ ದೊರಕಬಹುದಾದ ಜಲಾಶಯದ ನೀರಿನ ಪ್ರಮಾಣದ ಮಾಹಿತಿ ಮತ್ತು ದಿನಾಂಕಗಳನ್ನು ಸೂಚಿಸಿ ನೀರಾವರಿ ಸಲಹಾ ಸಮಿತಿಯನ್ನು ಕರೆಯುವ ಬಗ್ಗೆ ಅಭಿಪ್ರಾಯ ಕೇಳಲಾಗಿತ್ತು. ಹೆಚ್ಚಿನ ಸದಸ್ಯರಿಂದ ಸಮಿತಿಯನ್ನು ಕರೆಯುವ ಬಗ್ಗೆ ಪ್ರೋತ್ಸಾಹಕರ ಉತ್ತರ ಬಾರದಿದ್ದರಿಂದ ಸಮಿತಿಯನ್ನು ಕರೆಯುವ ವಿಚಾರವನ್ನು ಕೈ ಬಿಡಲಾಗಿದೆ. 4-2-91ಕ್ಕೆ ಸಮಿತಿ ಕರೆದದ್ದು, ಇವತ್ತಿಗೆ ಸುಮಾರು 2 ತಿಂಗಳಾಯಿತು. ಸಲಹಾ ಸದಸ್ಯರು ಪತ್ರ ಬರೆದರೂ ಕೂಡಾ ಪ್ರೋತ್ಸಾಹದಾಯಕ ಉತ್ತರ ಬಂದಿಲ್ಲ ಎನ್ನುವ ಕಾರಣಕ್ಕಾಗಿ ಮೀಟಿಂಗ್ ಕರೆಯುವ ಅಗತ್ಯವಿಲ್ಲವೆಂದು ಅಧಿಕಾರಿಗಳು ತೀರ್ಮಾನ ಮಾಡಿದರೆ, ಸರ್ಕಾರ ಏನು ಮಾಡಬೇಕು? ಚುನಾಯಿತ ಸದಸ್ಯರು ಏಕಿರಬೇಕು ಇಲ್ಲಿ? ಅವರ ಅಭಿಪ್ರಾಯಕ್ಕೆ ಮನ್ನಣೆ ಇಲ್ಲ ಎನ್ನುವುದನ್ನು ನಿರ್ಣಯ ಮಾಡತಕ್ಕಂಥ ಅಧಿಕಾರವನ್ನು ಜವಾಬ್ದಾರಿಯನ್ನು ಅಧಿಕಾರಿಗಳ ಕೈಗೆ ಬಿಟ್ಟುಬಿಟ್ಟರೆ ಹೇಗೆ? ಇದು ಅಂತರ ರಾಜ್ಯ ಪ್ರಾಜೆಕ್ಟ್. ಆದ್ದರಿಂದ ಎಚ್ಚರಿಕೆ ವಹಿಸಬೇಕೆಂದು ನಮಗೂ ಗೊತ್ತಿದೆ. ಯಾವಾಗ ಎಚ್ಚರಿಕೆ ವಹಿಸಬೇಕು? ನೀರು ನಿಗದಿಯಾದ ಪ್ರಮಾಣಕ್ಕಿಂತ ಕಡಿಮೆ ಇದ್ದರೆ, ಅಥವಾ ನಿಗದಿಯಾದ ಪ್ರಮಾಣವಷ್ಟೇ ಬಂದಿದ್ದರೆ ಎಚ್ಚರಿಕೆ ವಹಿಸಬೇಕು. ಇಲ್ಲಿ ವಿಶೇಷವಾಗಿ ಅವಕಾಶ ಇದ್ದಾಗಲೂ ಕೂಡಾ ಕರ್ನಾಟಕದ ಹಿತ ಕಾಪಾಡುವುದಕ್ಕೆ ಸರ್ಕಾರ ಮುಂದೆ ಬರದಿದ್ದರೆ ನಾನು ಏನು ಹೇಳಬೇಕೋ ಗೊತ್ತಿಲ್ಲ. ಇದಕ್ಕೆ ನಿಮ್ಮ ಉತ್ತರ ಬಂದ ಮೇಲೆ ನಾನು ಹೇಳುತ್ತೇನೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಚಾಮರಾಜನಗರ ತಾಲ್ಲೂಕಿನ ಕರಡಿ ಗುಡ್ಡ ಗ್ರಾನೈಟ್ ಕಲ್ಲನ್ನು ಹೊರಗೆ ಸಾಗಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಕರಡಿ ಗುಡ್ಡ ಎಂದು ಇದೆ. ಇದು ಬಹಳ ಪವಿತ್ರವಾದ ಸ್ಥಳ. ಅದು ಬಿಳಿಗಿರಿ ರಂಗನ ಬೆಟ್ಟಕ್ಕೆ ಸೇರತಕ್ಕಂಥ ಒಂದು ಬಹಳ ಸುಂದರವಾದಂಥ ನಿಸರ್ಗ

ಸಂಪತ್ತು ಇರತಕ್ಕಂಥಾದ್ದು ಹಾಗೂ ಇತಿಹಾಸವುಳ್ಳ ಸ್ಥಳ. ಇದರ ಪಕ್ಕದಲ್ಲಿ ಬೆಲ್ಲತ್ತ ಎಂದು ಹೇಳಿ ಒಂದು ಜಲಾಶಯ ಇದೆ ಮತ್ತು ಕೃಷ್ಣಯ್ಯನ ಕಟ್ಟೆ ಎಂದು ಇನ್ನೊಂದು. ಈ ಕೃಷ್ಣಯ್ಯನ ಕಟ್ಟೆಯಲ್ಲಿ ಸಾವಿರಾರು ಆನೆಗಳು ಬಂದು ನೀರು ಕುಡಿಯುತಕ್ಕಂಥಾದ್ದು. ಇದು ಬಹಳ ದೊಡ್ಡ ಕಥೆ.

ಅಧ್ಯಕ್ಷರು: ಅಲ್ಲಿ ಇನ್ನೂ ಸಾವಿರಾರು ಆನೆಗಳು ಇದೆಯೇ?

ಶ್ರೀ ವಾಟಾಳ್ ನಾಗರಾಜ್: ಹಿಂದೆ ಇದ್ದವು. ಈಗ ಬಹಳ ಕಡಿಮೆಯಾಗಿವೆ.

ಅಧ್ಯಕ್ಷರು: ನೂರಾರು ಎಂದೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಸಾವಿರಾರು ಹೊರಟುಹೋಗಿದೆ. ನೂರಾರು ಆನೆಗಳು ಮಾತ್ರ ಇವೆ. ಈ ಕರಡಿ ಗುಡ್ಡದ ಕಲ್ಲನ್ನು ಹೊಡೆದು ಸಾಗಿಸಬೇಕೆಂದು ಬಹಳ ಪ್ರಯತ್ನ ನಡೆಯುತ್ತಿದೆ. ಆದರೆ, ಅಲ್ಲಿನ ಅರಣ್ಯ ಅಧಿಕಾರಿಗಳು ಅವಕಾಶ ಕೊಡುತ್ತಿಲ್ಲ. ಪ್ರಭಾವ ಇದರ ಮೇಲೆ ಬಹಳ ಬೀಳುತ್ತಿದೆ. ಈ ಬೆಲ್ಲತ್ತ ಜಲಾಶಯ ಏನಿದೆ, ಈ ಜಲಾಶಯ ಸಾವಿರಾರು ಏಕರೆ ಪ್ರದೇಶಕ್ಕೆ ನೀರನ್ನು ಒದಗಿಸತಕ್ಕಂಥ ಜಲಾಶಯ. ಇದಕ್ಕೆ ಬಹಳ ಅಪಾಯ ಒದಗುತ್ತಿದೆ. ಈ ಬಗ್ಗೆ ಸರ್ಕಾರ ಸ್ವಲ್ಪ ಗಮನ ಹರಿಸಿ, ಇದರ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕು. ಈ ರೈತರುಗಳಿಗೆ ಅನುಕೂಲ ಮಾಡಬೇಕೆಂದು, ಜಲಾಶಯಗಳನ್ನು ಕಟ್ಟುವುದು ಒಂದು ಕಡೆ, ಮತ್ತೊಂದು ಕಡೆ ಈ ಬೆಲ್ಲತ್ತ ಜಲಾಶಯಕ್ಕೆ ಬಹಳ ತೊಂದರೆ ಮಾಡುತ್ತಿದ್ದಾರೆ. ಈ ಪ್ರದೇಶದಲ್ಲಿ ನೂರಾರು ಜನ ಕಲ್ಲನ್ನು ತೆಗೆದುಕೊಂಡಿದ್ದಾರೆ. ಕಲ್ಲನ್ನು ಹೊಡೆಯುವ ಬಗ್ಗೆ ಸಿಡಿಮದ್ದನ್ನು ಇಡುವಾಗ ಜಲಾಶಯಕ್ಕೆ ಅಪಾಯ ಬರತಕ್ಕಂಥ ಪರಿಸ್ಥಿತಿ ಒದಗಿದೆ. ಆದ್ದರಿಂದ ಕೂಡಲೇ ತಾವು ಆ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಪರಿಶೀಲನೆಗೆ ಕಳುಹಿಸಿ ಅನ್ಯಾಯವಾಗದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು. ಇದು ಚಾಮರಾಜನಗರ ತಾಲ್ಲೂಕು ಮತ್ತು ಬಿಳಿಗಿರಿರಂಗನ ಬೆಟ್ಟದ ಮಧ್ಯೆ ಬರುತ್ತದೆ. ಇದು ಒಂದು ಒಳ್ಳೆ ಜಲಾಶಯ. ಇದಕ್ಕೆ ಒಂದು ಇತಿಹಾಸ ಇದೆ. ಪಕ್ಕದಲ್ಲಿ ಕೃಷ್ಣಯ್ಯನ ಕಟ್ಟೆ ಎಂದು ಇದೆ. ಇದಕ್ಕೂ ಒಂದು ಇತಿಹಾಸ ಇದೆ. ನಾನು ಹೇಳಿರುವ ಬಗ್ಗೆ ತಾವು ವಿಚಾರ ಮಾಡುತ್ತೀರೆಂದು ನಾನು ನಂಬಿಕೊಂಡಿದ್ದೇನೆ.

ಅಧ್ಯಕ್ಷರು: ನಿಮ್ಮ ಚಾಮರಾಜ ನಗರ ಕ್ಷೇತ್ರದಲ್ಲಿ ಇತಿಹಾಸ ಇಲ್ಲದೆ ಇರತಕ್ಕಂಥ ಪ್ರದೇಶ ಯಾವುದಾದರೂ ಉಳಿದಿದೆಯೇ?

ಶ್ರೀ ವಾಟಾಳ್ ನಾಗರಾಜ್: ಯಾವುದೂ ಕಾಣುತ್ತಿಲ್ಲ. ತಾವು ಬರಬೇಕು. ಪ್ರತಿ ಒಂದು ಕಲ್ಲೂ ಒಂದು ಇತಿಹಾಸ. ಕಲ್ಲಿನಿಂದ ಇತಿಹಾಸ ನಿರ್ಮಾಣ ಆಗಿದೆ. ಇಂತಹ ಇತಿಹಾಸ ಪ್ರಸಿದ್ಧವಾದ ಇತಿಹಾಸ ಪ್ರಸಿದ್ಧರಾದ ಪುರುಷರು ಬಂದಂತಹ ಸ್ಥಳ ಆಗಿದೆ. ತಾವು ದಯಮಾಡಿ ಒಂದು ಸಾರಿ ಅಲ್ಲಿಗೆ ಬರಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ವಾಟಾಳ್ ನಾಗರಾಜ್ ಅವರು ಕೂಡ ಒಬ್ಬ ಇತಿಹಾಸ ಪುರುಷರು ಆಗಿದ್ದಾರೆ.

ಶ್ರೀ ಎಂ. ಸಿದ್ದಮಾದಯ್ಯ: ಮಾನ್ಯ ವಾಟಾಳ್ ನಾಗರಾಜ್ ಅವರು ಗುಡ್ಡ ನೋಡಿಯೇ ಇಲ್ಲ. ಇವರಿಗೆ ಆ ಸ್ಥಳ ಗೊತ್ತೇ ಅಲ್ಲ. ಯಾವುದೋ ಊರು ನೋಡಿ ಯಾವುದೋ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಯಳಂದೂರು ಪಕ್ಕದಲ್ಲಿ ಏನು ಇದೆ ಎಂದು ಇವರಿಗೆ ಗೊತ್ತಿಲ್ಲ. ಚುನಾವಣೆ ಸಂದರ್ಭ ಬಂದಾಗ ಮಾತ್ರ ಇವರಿಗೆ ಗೊತ್ತಿರುತ್ತದೆ. ಆ ಸಂದರ್ಭ ಬಿಟ್ಟರೆ ಮಿಕ್ಕ ಟೈಮ್‌ನಲ್ಲಿ ಇವರಿಗೆ ಗೊತ್ತಿಲ್ಲ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್ ಅವರು ಸಾರ್ವಜನಿಕ ಕ್ಷೇತ್ರಕ್ಕೆ ಲಗತ್ತಿಸಿದಂತೆ ಏನೋ ಹೇಳುತ್ತಿದ್ದಾರೆ. ಹೇಳಲಿ ಬಿಡಿ. ನಿಮ್ಮದು ಏನಾದರೂ ಹೇಳುವುದು ಇದ್ದರೆ ನಿಮಗೂ ಅವಕಾಶ ಕೊಡುತ್ತೇನೆ. ನೆಕ್ಸ್ಟ್ ನಿಮ್ಮನ್ನು ಕರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಬಿಳಿಗಿರಿರಂಗನ ಬೆಟ್ಟ ಇವರಿಗೆ ಸೇರುತ್ತದೆ. ಅವರು ಇದರ ಬಗ್ಗೆ ಮಾತನ್ನೇ ಆಡಿಲ್ಲ.

ಅಧ್ಯಕ್ಷರು: ಅದನ್ನು ಬಿಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್: ಬೆಲ್ಲತ್ತ ಜಲಾಶಯ ಹಾಗೂ ಕೃಷ್ಣಯ್ಯನ ಕಟ್ಟೆ ಜಲಾಶಯ ಅಪಾಯದ ಅಂಚಿನಲ್ಲಿದೆ ಎಂದು ತಿಳಿಸಿದ್ದೇನೆ. ಸರ್ಕಾರ ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ?

ಅಧ್ಯಕ್ಷರು: ಅದನ್ನು ಕಳಿಸಿಕೊಡಿ. ಮಾನ್ಯ ವೆಂಕಟೇಶ್ ಕಲ್ಲಿನ ಬಗ್ಗೆ ವಿಚಾರವನ್ನು ಹೇಳಿ..

ಶ್ರೀ ಎಂ.ಪಿ. ವೆಂಕಟೇಶ್: ಕಲ್ಲಿನ ವಿಚಾರ ಅಲ್ಲ. ನಮ್ಮ ಕಬಿನಿ ಜಲಾಶಯದಲ್ಲಿ ರೈಟ್ ಬ್ಯಾಂಕ್‌ನಲ್ಲಿ ಎಂಬ್ಯಾಂಕ್‌ಮೆಂಟ್ ಒಡೆದು ಹೋಗುತ್ತಿದೆ. ನೀರು ಬಿಡುವುದಕ್ಕೆ ನಂಜನಗೂಡು ತಾಲ್ಲೂಕಿನ ರೈತರು ಒತ್ತಾಯ ಮಾಡಿದ ಮೇರೆಗೆ ಸರ್ಕಾರ ಆದೇಶ ಕೊಟ್ಟ ಮೇರೆಗೆ ಇವತ್ತು ನೀರು ಬಿಡುತ್ತಿದ್ದಾರೆ. ಕಬಿನಿ ಜಲಾಶಯದಲ್ಲಿ ಎಂಬ್ಯಾಂಕ್‌ಮೆಂಟ್ ಒಡೆದು ಗ್ರಾಮಗಳಿಗೆ ನೀರು ನುಗ್ಗುವ ಸಂಭವ ಇದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಜವಾಬ್ದಾರಿ ತೆಗೆದುಕೊಂಡು ರಾತ್ರಿ ಹಗಲು ಮಣ್ಣು ಹಾಕಿ, ಸಿಮೆಂಟ್ ಹಾಕಿ ಜವಾಬ್ದಾರಿಯನ್ನು ಇಟ್ಟುಕೊಂಡಿದ್ದಾರೆ. ಈ ಸಾರಿ ನೀರು ಕೊಡುವಂತಹ ಕಾಲದಲ್ಲಿ ನೀರು ಬಿಟ್ಟರೆ ಎಂಬ್ಯಾಂಕ್‌ಮೆಂಟ್ ಒಡೆಯುವ ಸಂಭವ ಇದೆ. ಆದ್ದರಿಂದ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಿ ಇದನ್ನು ರಿಪೇರಿ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಸುಮಾರು 20-30 ಹಳ್ಳಿಗಳು ಮುಳುಗಿ ಹೋಗುವಂತಹ ಸಂದರ್ಭ ಬರುತ್ತದೆ, ಇಂತಹ ಸಂದರ್ಭ ಬಂದು ತೊಂದರೆ ಬರುತ್ತದೆ.

2) ಶಿವಮೊಗ್ಗ ಬಸ್ ನಿಲ್ದಾಣದ ಕೆಲಸವನ್ನು ಪೂರ್ತಿ ಮಾಡುವುದು.

ಶ್ರೀ ಕೆ.ಎಸ್. ಈಶ್ವರಪ್ಪ: ಇಂದು ಮಾರ್ಚ್ 27ನೇ ತಾರೀಖು. ಸದನದ ಕೊನೆ ದಿನಕ್ಕೆ ನಾವು ಇವತ್ತು ಸೇರುತ್ತಿದ್ದೇವೆ. ಶಿವಮೊಗ್ಗದಲ್ಲಿ ಬಸ್ ಸ್ಟ್ಯಾಂಡನ್ನು ಮಾರ್ಚ್ 30, 1991ರೊಳಗೆ ಕೆಲಸ ಮುಗಿಸಿಬಿಡುತ್ತೇವೆ ಎಂದು ನನಗೆ ಮಂತ್ರಿಗಳಿಂದ ಉತ್ತರ ಬಂದಿದೆ. ಇವರು ಬಸ್ ಸ್ಟ್ಯಾಂಡೇ ಮುಗಿಸಿಬಿಡುತ್ತಾರೇನೋ ಎಂದು ನನಗೆ ಭಯ ಆಗುತ್ತದೆ. ಏಕೆಂದರೆ ಇನ್ನು ಮೂರು ದಿನ ಇದೆ. ಅಲ್ಲಿ ಇನ್ನು ಕೆಲಸ ಶುರು ಆಗಿಲ್ಲ. ಕನಿಷ್ಟ ಅಂದರೂ ಕೂಡ ಇನ್ನೂ ಒಂದು ಒಂದೂವರೆ ತಿಂಗಳು ಮಾಡುವಷ್ಟು ಕೆಲಸ ಅಲ್ಲಿ ಉಳಿದಿದೆ. ಈ ಸದನದಲ್ಲಿ ಸತ್ಯಕ್ಕೆ ದೂರವಾದ ಉತ್ತರ ಕೊಡುತ್ತಿದ್ದಾರೆ. ಮೂರು ಸಾರಿ ಉತ್ತರ ಕೊಟ್ಟಿದ್ದಾರೆ, ಮೂರು ಸಾರಿ ಕೂಡ ಈ ರೀತಿ ಆಗಿದೆ. ತಮ್ಮ ಗಮನಕ್ಕೂ ನಾನು ತಂದಿದ್ದೇನೆ. ಈ ರೀತಿ ಆದರೆ ಶಿವಮೊಗ್ಗದ ಜನರಿಗೆ ಏನು ಉತ್ತರ ಕೊಡುವುದು. ಅಲ್ಲಿ ಏನೇನೂ ಕೆಲಸ ಆಗುತ್ತಿಲ್ಲ. ಸರಿಯಾಗಿ ಹೆಣ್ಣು ಮಕ್ಕಳಿಗೆ ಕಕ್ಕಸ್ಸು ಇಲ್ಲ, ತುಂಬಾ ತೊಂದರೆ ಆಗುತ್ತಿದೆ. ಸರ್ಕಾರದ ಗಮನಕ್ಕೆ ತಂದು ತಂದು ಸಾಕಾಗಿದೆ. ಅದಕ್ಕೋಸ್ಕರವಾಗಿ ನಾನು ಶಿವಮೊಗ್ಗದ ಜನಕ್ಕೆ ಇಲ್ಲಿಂದಲೇ ಕರೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನು ಮಾರ್ಚ್ 30ನೇ ತಾರೀಖು ಕೊನೆ ದಿನ ಎಂದು ಹೇಳಿದ್ದೀರಿ. ಅದರ ಪ್ರಕಾರ ನಡೆದು ಕೊಳ್ಳುವುದೇ ಇರುವುದರಿಂದ ಚಳುವಳಿ ಒಂದೇ ದಾರಿ ಉಳಿದಿರುವುದು. ರಸ್ತೆ ರೋಕೋ ಕಾರ್ಯಕ್ರಮವನ್ನು ಮಾರ್ಚ್ 30ನೇ ತಾರೀಖು ಮಾಡಿಯೇ ಮಾಡುತ್ತೇವೆಂದು